ಶ್ರೀ ಕೆ. ಪೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಹಿರಿಯ ಜನರಿಗೆ ಮಾತ್ರ ನೇಮಕಾತಿ ಆಗಿದೆ. ಈ ಕಾರ್ಯಕ್ರಮ ಜಾರಿಗೆ ಬಂದಾಗ ಆ ಯೋಜನೆ ಅಡಿಯಲ್ಲಿ ಎಷ್ಟು ಹುದ್ದೆಗಳು ಇರುತ್ತವೆಯೋ ಅಷ್ಟು ಹುದ್ದೆಗಳನ್ನು ಮಾತ್ರ ನೇಮಕ ಮಾಡಲಾಗಿದೆ. ಯೋಜನೇತರ ಅಡಿಯಲ್ಲಿ ಬರುವಂತಹ ಹುದ್ದೆಗಳನ್ನು ಖಾಲಿ ಇಡಬೇಕೆಂದು ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಆಜ್ಞೆ ಇತ್ತು. ಈ ಒಂದು ನೇಮಕಾತಿಯಲ್ಲಿ ಹಿರಿಯ ಜನರನ್ನು ಮಾತ್ರ ನೇಮಕ ಮಾಡಲಾಗಿದೆ, ಬಾಕಿ ಉಳಿದವರನ್ನು ಹಾಗೆ ಇಡಲಾಗಿದೆ. ಈಗ ಸರ್ಕಾರ ಯೋಜನೇತರ ಅಡಿಯಲ್ಲಿ ಬರತಕ್ಕಂಥ ಹುದ್ದೆಗಳನ್ನು ಹಾಗೆ ಖಾಲಿ ಇಡಬೇಕಾದ್ದಿಲ್ಲ ಎಂದು ತೀರ್ಮಾನ ತೆಗೆದುಕೊಂಡಿದೆ. ಮತ್ತು ಆ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ವಿಚಾರ ಮಾಡಿರುವುದರಿಂದ ಅತಿ ಶೀಘ್ರದಲ್ಲಿ ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ ಹೆಚ್. ಹನುಮೇಗೌಡ.—ಆಪರೇಶನ್ ಬ್ಲಾಕ್ ಬೋರ್ಡ್ ಸ್ಕೀಮ್‌ನಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಂಡಿದ್ದೀರಿ. ಈಗ ಜನರಲ್ಲಾಗಿ ಸಾವಿರಾರು ವೇಕೆನ್ಸಿಗಳು ಇವೆ. ಆ ರೀತಿ ಜನರಲ್ ಆಗಿ ಇರತಕ್ಕ ವೇಕೆನ್ಸಿ ಜಾಗಗಳಿಗೆ ಈ ಉಪಾಧ್ಯಾಯರನ್ನು ತುಂಬಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಪೆಚ್. ರಂಗನಾಥ್.—ಹಿಂದೆ ಮಿತವ್ಯಯದ ಆದೇಶ ಇತ್ತು. ಅದನ್ನು ಸರ್ಕಾರ ಈಗ ಸಡಿಲ ಮಾಡಿದೆ. ಆದುದರಿಂದ ಈಗ ಅವರಿಗೆ ನೇಮಕಾತಿ ಆಜ್ಞೆ ಕೊಡುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ನೇಮಕಾತಿ ಸಮಿತಿಯಲ್ಲಿ ಮೂರು ಜನ ಅಧಿಕಾರಿಗಳು ಇದ್ದರು. ಈ ನೇಮಕಾತಿ ಸಮಿತಿಯವರ ಮೇಲೆ ಅನೇಕ ವಿಧವಾದ ಭ್ರಷ್ಟಾಚಾರ ಆಪಾದನೆಗಳು ಬಂತು. ಆದರಲ್ಲಿ ನಾನ್ ಆಫೀಷಿಯಲ್ ಮೆಂಬರ್ಸ್ ಯಾರೂ ಇರಲಿಲ್ಲ. ಅದು ಪತ್ರಿಕೆಗಳಲ್ಲಿ ಸಹ ಬಂತು, ಸರ್ಕಾರಕ್ಕೂ ಕೂಡ ಅನೇಕ ದೂರುಗಳು ಬಂದಿವೆ ಎಂದು ನಾನು ಕೇಳಿದ್ದೇನೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಮುಂದೆ ಇಂತಹ ಸಮಿತಿಗಳಲ್ಲಿ ಅಧಿಕಾರೇತರ ಸದಸ್ಯರನ್ನು ಸೇರಿಸಲು ಯೋಚನೆ ಮಾಡುತ್ತೀರಾ ?

ಶ್ರೀ ಕೆ ಪೆಚ್. ರಂಗನಾಥ್.—ಮುಂದೆ ನೇಮಕಾತಿ ಸಮಿತಿಗಳನ್ನು ರಚನೆ ಮಾಡುವಾಗ ಅಧಿಕಾರೇತರ ಸದಸ್ಯರನ್ನು ಸೇರಿಸಬೇಕೆನ್ನುವ ಅಭಿಪ್ರಾಯ ಸರ್ಕಾರಕ್ಕಿದೆ. ಅದನ್ನು ಕಾರ್ಯಗತ ಮಾಡುತ್ತೇವೆ. ಆದರೆ ಮಾನ್ಯ ಸದಸ್ಯರು ಏನು ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ನಾನು ಉತ್ತರ ಕೊಡುತ್ತೇನೆ.

ಸಂಜನಗೂಡು ಟೌನಿಗೆ ಕುಡಿಯುವ ನೀರಿನ ಯೋಜನೆ

೯೨೩. ಶ್ರೀ ಎಂ. ಮಹದೇವ್ (ಸಂಜನಗೂಡು).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಂಜನಗೂಡು ಟೌನಿಗೆ ಹೊಸದಾಗಿ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತ ಗೊಳಿಸಲು ಅಂದಾಜು ತಯಾರಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಅದು, ಈಗ ಯಾವ ಹಂತದಲ್ಲಿದೆ ?

ಇ) ಈ ಯೋಜನೆ ಕಾರ್ಯ ಯಾವಾಗ ಪ್ರಾರಂಭವಾಗುವುದು ಮತ್ತು ಎಂದು ಪೂರ್ತಿಗೊಳಿಸಲಾಗುವುದು ?

ಈ) ಶ್ರೀ ಕಂಠೇಶ್ವರ ದೇವಸ್ಥಾನದ ಮುಜರಾಯಿ ಫಂಡಿನಿಂದ ಈ ಕುಡಿಯುವ ನೀರಿನ ಯೋಜನೆಗೆ ೨೫.೦೦ ಲಕ್ಷ ರೂಪಾಯಿ ಸಹಾಯಧನ ನೀಡಲು ಮುಂದೆ ಬಂದಿರುವರು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು

ಆ) ಸರ್ಕಾರದ ಪರಿಶೀಲನೆಯಲ್ಲಿದೆ

ಇ) ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯ ನಂತರ ಪ್ರಾರಂಭಿಸಿ ೧½ ವರ್ಷಗಳಲ್ಲಿ ಪೂರ್ತಿಗೊಳಿಸಲಾಗುವುದು.

ಈ) ಬಂದಿದೆ

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ನಂಜನಗೂಡು ಟೌನಿನ ಕುಡಿಯುವ ನೀರಿನ ಯೋಜನೆಯ ಅಂದಾಜು ವೆಚ್ಚ ಎಷ್ಟು ಮತ್ತು ಅದರ ವಿವರಗಳನ್ನು ನನಗೆ ಒದಗಿಸಿಕೊಡುತ್ತಾರೆಯೇ ? ಏಕೆಂದರೆ ನಮಗೆ ವಿಷದ ನೀರು ಕುಡಿದು ಕುಡಿದು ಸಾಕಾಗಿದೆ. ನಂಜನಗೂಡಿನ ಜನ ನಮಗೆ ಒಳ್ಳೆಯ ನೀರು ಯಾವಾಗ ಕುಡಿಸುತ್ತಾರೆಂದು ಬಹಳ ಕಾತುರತೆಯಿಂದ ಇದ್ದಾರೆ. ನಂಜನಗೂಡು ದಕ್ಷಿಣ ಕಾಶಿ. ಅಲ್ಲಿಗೆ ಹೊರಗಡೆಯಿಂದ ಲಕ್ಷಾಂತರ ಜನ ಭಕ್ತಾದಿಗಳು ಬರುತ್ತಾರೆ. ನಾವು ವಿಷದ ನೀರು ಕುಡಿಯುವುದರ ಜೊತೆಗೆ ಭಕ್ತಾದಿಗಳಿಗೂ ವಿಷದ ನೀರನ್ನು ಕುಡಿಸುವುದಕ್ಕೆ ಇಷ್ಟವಿಲ್ಲ. ಆದುದರಿಂದ ನಂಜನಗೂಡಿನ ನಾಗರೀಕರಿಗೆ ಒಳ್ಳೆಯ ನೀರನ್ನು ಯಾವಾಗ ಕೊಡುತ್ತೀರಿ ? ಈ ಯೋಜನೆಯ ಅಂದಾಜು ವೆಚ್ಚದ ವಿವರವನ್ನು ದಯವಿಟ್ಟು ಕೊಡುತ್ತೀರಾ.

೧೨-೦೦ ಪಿ. ಎಂ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೇ. ಸನ್ಮಾನ್ಯ ಸದಸ್ಯರಾದಂಥ ಮಹದೇವ್‌ರವರು ಒಂದು ಪ್ರಸಂಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಂಜನಗೂಡು ಟೌನ್‌ಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಮಾಡಿ ವಿಷದ ನೀರನ್ನು ಮತ್ತು ಕಲುಷಿತ ನೀರನ್ನು ಒದಗಿಸಲಾಗುತ್ತಿದೆಯೆಂದು ಹೇಳಿದ್ದಾರೆ. ಅದನ್ನು ಸರ್ಕಾರ ಗಮನಿಸಿಕೊಂಡಿದೆ. ಅದರ ಮೂಲ ವ್ಯವಸ್ಥೆಯನ್ನು ಮಾರ್ಪಾಡು ಮಾಡುವುದಕ್ಕೋಸ್ಕರ ಸುಮಾರು ೧ ಕೋಟಿ ೭೫ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಆದ್ಯತೆ ಮೇರೆಗೆ ಆ ಯೋಜನೆಯನ್ನು ಕೈಗೊಂಡು ಮುಗಿಸಲಾಗುತ್ತದೆ. ಮಾನ್ಯ ಸದಸ್ಯರು ಇದು ಯಾತ್ರಾ ಸ್ಥಳವಾಗಿದೆಯೆಂದೂ ಹೇಳಿದ್ದಾರೆ. ನನಗೆ ಗೊತ್ತು, ಅದು ನನಗೆ ಜನ್ಮ ಕೊಟ್ಟಂತಹ ತಾಯಿಯ ತವರೂರು ಕೂಡ ಆಗಿದೆ. ಆದ್ದರಿಂದ ಈ ಯೋಜನೆಯನ್ನು ಹೆಚ್ಚು ಆದ್ಯತೆ ಮೇರೆಗೆ ಕೈಗೊಂಡು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲು ಆ ಯೋಜನೆಯನ್ನು ಪ್ರಾಮಾಣಿಕವಾಗಿ ಜಾರಿಗೆ ಕೊಡುತ್ತೇನೆಂದು ನಾನು ಭರವಸೆ ಕೊಡುತ್ತೇನೆ.

ಶ್ರೀ ಗೋವಿಂದರಾಜ ಆರ್. ಸಾಂಪ್ರ.—ನಾನು ಸಿಂಗಿನೇ ಪ್ರಶ್ನೆಯನ್ನು ಕೇಳುತ್ತೇನೆ.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ಆಗಲೇ ಸದನದಲ್ಲಿ ಇಲ್ಲದೇ ಇದ್ದ ಮಾನ್ಯ ಸದಸ್ಯರುಗಳ ಹೆಸರುಗಳನ್ನು ಪುನಃ ಕರೆಯುತ್ತೇನೆ. ಶ್ರೀ ಹರ್ಷಕುಮಾರ ಗೌಡ.

ಮೈಸೂರು ನಗರದ ನೀರಿನ ಅಭಾವ ನೀಗಿಸುವ ಬಗ್ಗೆ

೧೦೧೮. ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರದ ಪ್ರಸಕ್ತ ಜನತೆಗೆ ಬೇಕಾಗುವ ಕುಡಿಯುವ ನೀರಿನ ಪ್ರಮಾಣವೆಷ್ಟು ?

ಆ) ನೀರಿನ ಅಭಾವವನ್ನು ನೀಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಈ ಕಾರ್ಯಕ್ರಮ ಜಾರಿಗೊಳಿಸಲು ಸರ್ಕಾರವು ಖರ್ಚು ಮಾಡುವ ಹಣವೆಷ್ಟು ?

ಈ) ಯಾವಾಗ ಈ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಸುಮಾರು ೯೪.೫೦ ದಶಲಕ್ಷ ಲೀಟರ್.

ಆ) ಈ ಬೇಸಿಗೆಯಲ್ಲಿ ಒಟ್ಟು ೭೯ ಕೊಳವೆ ಬಾವಿಗಳನ್ನು ತೋಡಲಾಗಿದ್ದು, ಇವುಗಳಲ್ಲಿ ೨೫ ಕೊಳವೆ ಬಾವಿಗಳಿಗೆ ವಿದ್ಯುತ್ ಯಂತ್ರಗಳನ್ನು ಅಳವಡಿಸಲಾಗಿದೆ. ಇದಲ್ಲದೆ, ನಗರಕ್ಕೆ ನೀರಿನ ಪ್ರಮಾಣವನ್ನು ಹೆಚ್ಚಿಸಲು ಎರಡು ಯೋಜನೆಗಳನ್ನು ಒಟ್ಟು ರೂ. ೨೬೩,೦೦೦ ಲಕ್ಷಗಳಿಗೆ ತಯಾರಿಸಲಾಗಿದ್ದು, ಈ ಯೋಜನೆಯಲ್ಲಿ ಒಟ್ಟು ೪೫.೪೦ ದಶಲಕ್ಷ ಲೀಟರ್ ನೀರನ್ನು ಕಾವೇರಿ ನದಿಯಿಂದ ಒದಗಿಸುವ ಕಾರ್ಯಪ್ರಗತಿಯಲ್ಲಿದೆ. ಈ ಯೋಜನೆಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೆಲಸ ಮಾಡಲಾಗುತ್ತಿದೆ ಇದಲ್ಲದೆ ಸರ್ಕಾರವು ನಗರದಲ್ಲಿರುವ ವಿತರಣಾ ಕೊಳವೆಗಳನ್ನು ನವೀಕರಿಸಲು ರೂ. ೬೫೦.೦೦ ಲಕ್ಷಗಳ ಅಂದಾಜಿಗೆ ಒಪ್ಪಿಗೆ ನೀಡಲಾಗಿದೆ.